# <u>ಮನ್ಮಥ ಜನಕನ ಮರೆತ ಮನುಜರು</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 438.
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 402.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. Note: Lyrics given here are as per Ref. 1. The wordings in Ref. 2 are same as in Ref. 1.

ರಾಗ: ಧನ್ಯಾಸಿ ತಾಳ: ಆದಿ

ಮನ್ಮಥಜನಕನ ಮರೆತ ಮನುಜರು
ಮರ ಮರ ಮರ ಮರಾ ಮರಾ
ಚಿನ್ಮಯರೂಪನ ಚಿಂತಿಸದವನು
ಛೀ ಛೀ ಛೀ ಛೀ ಛೀ ಮನುಜ || ಪ ||

ಸುರರಿಂ ವಂದ್ಯನ ಸುತ್ತದ ಕಾಲು ಸೂಳೆಮನೆ ಮಂಚದ ಕಾಲು
ಉರಗಶಯನನ ನುಡಿಯದ ನಾಲಿಗೆ ಉಡುವಿನ ನಾಲಿಗೆಯು || 1 ||

ನಾರಾಯಣನ ಕಥೆ ಕೇಳದ ಕಿವಿ ಸೋರುವ ಮಾಳಿಗೆ ನಾಳಗಳು
ಸರಸಿಜನಾಭನ ಎತ್ತದ ಹೆಗಲು ಸತ್ತ ಕುರಿಯ ಹೆಗಲು || 2 ||

ಹರಿ ನೈವೇದ್ಯ ಉಣ್ಣದ ಬಾಯಿ ಹರಿದಾಡುವ ಹಾವಿನ ಹೋರು
ನರಹರಿ ರೂಪನ ನೋಡದ ಕಣ್ಣು ನವಿಲುಗರಿಯ ಕಣ್ಣು || 3 ||

ಕರಿವರದನ ಪೂಜಿಸದ ಕರಗಳು ದಾರಿಯ ತೋರುವ ಮರದ ಕೈಗಳು
ಗರುಡಗಮನನ ನಮಿಸದ ಶಿರವು ಉರಗನ ವಿಷ ತಲೆಯು || 4 ||

ಮಂಗಳಮೂರ್ತಿಯ ಪಾಡದ ಕಂಠ ಒಡೆದು ಹೋದ ಹರವಿನ ಕಂಠ
ರಂಗ ಪುರಂದರ ವಿಠಲನ ಮರೆತವ ರಜಕನ ಮನೆ ಕತ್ತೆಯೆ ನಿಜವು || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಸುರರಿಂ ಮದ್ಯನ ಸುತ್ತದ** – ದೇವತೆಗಳಿಂದ ಪೂಜಿಸಲ್ಪಡುವ ನಾರಾಯಣನಿಗೆ ಪ್ರದಕ್ಷಿಣೆ ಮಾಡದ.

**ಉಡು** – ಉಡ; ಒಂದು ಬಗೆಯ ಪ್ರಾಣಿ; ಗೋಧೆ, ಮುಶಲಿಕೆ.

**ಹಾವಿನ ಹೋರು** – ಹಾವಿನ ಹುತ್ತ.

**ಹರವಿನ ಕಂಠ** – ಮಣ್ಣಿನ ಕೊಡದ (ಪರವಿ) ಕತ್ತು.

**ರಜಕ** – ಅಗಸ.

**Classification:** Keerthane
**Ankita:** purandara vittala
**Location:** NA
**Category:** Bhakti
**Sub-Category:** manmatha, Vishnu, Narayana, mara, nara, devate, puje, suLe, kuri, Krishna, naivedya, bayi, oota, uraga, Narasimha, kannu, navilu, kai, dari, garuda, visha, mangala, ranga, katte,
**Pravachana:** NA
**Explanation:** NA